ಕೈಗಾರಿಕೆಗಳ ಪುನಶ್ಚೇತನ

10(124); ಶ್ರೀ ಅಪ್ಪಾಜಿ @ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ)

ಅ) ರಾಜ್ಯದಲ್ಲಿರುವ ಖಾಸಗಿ ಮತ್ತು ಸರ್ಕಾರದ ಬೃಹತ್ ಕೈಗಾರಿಕೆಗಳ ಸಂಖ್ಯೆ ಎಷ್ಟು ಮತ್ತು ಅವುಗಳ ಉತ್ಪಾದಿಸುವ ಉತ್ಪನ್ನಗಳು ಯಾವುವು (ಜಿಲ್ಲಾವಾರು ವಿವರ ನೀಡುವುದು)

ಆ) ಇವುಗಳಲ್ಲಿ ಸ್ಥಗಿತಗೊಂಡಿರುವ ಕೈಗಾರಿಕೆಗಳ ಸಂಖ್ಯೆ ಎಷ್ಟು?

ಇ) ಇವುಗಳನ್ನು ಪುನಶ್ಚೇತನಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಈ) ಬೃಹತ್ ಕೈಗಾರಿಕೆಗಳ ಪುನಶ್ಚೇತನಕ್ಕಾಗಿ ಸರ್ಕಾರದ ವತಿಯಿಂದ ಸಹಾಯಧನ ನೀಡಲಾಗಿದೆಯೇ?

ಉ) ಉತ್ತರ ಕರ್ನಾಟಕದಲ್ಲಿ ಕೈಗಾರಿಕೆಗಳನ್ನು ಹೆಚ್ಚಿಗೆ ಸ್ಥಾಪಿಸಲು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ (ಸಂಪೂರ್ಣ ಮಾಹಿತಿ ನೀಡುವುದು)

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು)

ಅ) ರಾಜ್ಯದಲ್ಲಿ 891 ಖಾಸಗಿ ವಲಯದ ಮತ್ತು 9 ಸರ್ಕಾರಿ ವಲಯದ ಕೈಗಾರಿಕೆಗಳಿದ್ದು, ಖಾಸಗಿ ವಲಯದಲ್ಲಿ ಸಕ್ಕರೆ, ಸಿಮೆಂಟ್, ಉಕ್ಕು ಮತ್ತು ಕಬ್ಬಿಣ, ಲಘು ವಾಹನಗಳು ಮತ್ತು ಬಿಡಿ ಭಾಗಗಳ ತಯಾರಿಕೆ, ಕಾಗದ, ಜವಳಿ, ಮೆಕ್ಕೆಜೋಳ ಮತ್ತು ಇತರ ಆಹಾರ ಸಂಸ್ಕರಣೆ ಹಾಗೂ ಇತರೆ ಉತ್ಪನ್ನಗಳನ್ನು ಉತ್ಪಾದಿಸುತ್ತಾರೆ. ಸರ್ಕಾರಿ ವಲಯದ ಕೈಗಾರಿಕೆಗಳು ವಿದ್ಯುತ್ ಉಪಕರಣಗಳು, ಸಾಬೂನು, ವಿದ್ಯುತ್ ಸ್ವಿಚ್ ಗೇರ್, ಬಣ್ಣ, ಕಾಗದ ಸಂಬಂಧಿತ ಉತ್ಪನ್ನಗಳು, ಸಕ್ಕರೆ, ವಿದ್ಯುತ್ ಮೋಟಾರ್ ಇತ್ಯಾದಿಗಳನ್ನು ಉತ್ಪಾದಿಸುತ್ತಾರೆ.

ಖಾಸಗಿ ವಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ 789 ಘಟಕಗಳ ಜಿಲ್ಲಾವಾರು ಹಾಗೂ ಸಂಖ್ಯಾವಾರು ಪಟ್ಟಿಯನ್ನು ಅನುಬಂಧ–1 ರಲ್ಲಿ ಮತ್ತು 9 ಸರ್ಕಾರಿ ವಲಯದ ಕೈಗಾರಿಕೆಗಳ ಪಟ್ಟಿಯನ್ನು ಅನುಬಂಧ–2 ರಲ್ಲಿ ಲಗತ್ತಿಸಿದೆ.

ಆ) ರಾಜ್ಯದಲ್ಲಿ 30 ಖಾಸಗಿ ಕೈಗಾರಿಕೆಗಳು ಮತ್ತು 6 ಸರ್ಕಾರದ ಕೈಗಾರಿಕೆಗಳು ಸ್ಥಗಿತಗೊಂಡಿರುತ್ತದೆ.

ಇ) ಸರ್ಕಾರಿ/ಖಾಸಗಿ ಬೃಹತ್ ಕೈಗಾರಿಕೆಗಳ ಪುನಶ್ಚೇತನಕ್ಕಾಗಿ ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ: ಸಿಐ/ಬಿಐಎಫ್/2010, ದಿನಾಂಕ:20/10/2010 ರಲ್ಲಿ ರೋಗಗ್ರಸ್ಥ ಕೈಗಾರಿಕೆಗಳ ಪುನಶ್ಚೇತನಕ್ಕಾಗಿ ವಿಶೇಷ ಪ್ಯಾಕೇಜನಡಿ ವಾಣಿಜ್ಯ ತೆರಿಗೆ ಬಾಕಿ ಇರುವ ಅಸಲು ಮುಂದೂಡಿಕೆ ಹಾಗೂ ಅದರ ಮೇಲೆ ಬಡ್ಡಿ ಮತ್ತು ಸುಸ್ತಿಬಡ್ಡಿ ವಿನಾಯಿತಿ ಹಾಗೂ ಮುದ್ರಾಂಕ ಶುಲ್ಕ ವಿನಾಯಿತಿ ಪರಿಗಣಿಸಲು ಅವಕಾಶವಿರುತ್ತದೆ ಈ ಕೆಳಕಂಡ ಘಟಕಗಳು ಬಿ.ಐ.ಎಫ್.ಆರ್ ಅಡಿ ನೋಂದಾಯಿಸಲಾಗಿದ್ದು, ಮೇಲ್ಕಂಡ ಸರ್ಕಾರದ ಆದೇಶದಂತೆ ಪ್ರೋತ್ಸಾಹಗಳನ್ನು ನೀಡಲು ಪರಿಗಣಿಸಿದೆ.

ಸರ್ಕಾರಿ ಬೃಹತ್ ಕೈಗಾರಿಕೆಗಳು

ಕ್ರ. ಸಂ	ಕೈಗಾರಿಕೆಗಳು
1	ಮೆ: ಹೆಚ್.ಎಂ.ಟಿ ಲಿ, ಬೆಂಗಳೂರು (ಕೇಂದ್ರ ಸರ್ಕಾರದ ಘಟಕಗಳು)
2	ಮೆ: ಐ.ಟಿ.ಐ ಲಿ ಬೆಂಗಳೂರು (ಕೇಂದ್ರ ಸರ್ಕಾರದ ಘಟಕಗಳು)

ಖಾಸಗಿ ಬೃಹತ್ ಕೈಗಾರಿಕೆಗಳು

ಕ್ರ. ಸಂ	ಕೈಗಾರಿಕೆಗಳು
1.	ಮೆ: ಬಾಗಲಕೋಟೆ ಸಿಮೆಂಟ್ & ಇಂಡಸ್ಟ್ರೀಸ್, ಬಾಗಲಕೋಟೆ
2.	ಮೆ: ಸೌತ್ ಇಂಡಿಯಾ ಸಿಮೆಂಟ್ಸ್ ಲಿ, ಗುಲ್ಬರ್ಗ
3.	ಮೆ: ಸಿಟಾ ಇಂಡಸ್ಟ್ರೀಸ್ ಲಿ, ತುಮಕೂರು
4.	ಮೆ: ಮೂಲಂಗಿ ಸ್ಪಿಂಟೆಕ್ಸ್ ಲಿ, ಬಳ್ಳಾರಿ
5.	ಮೆ: ಶಿವಮೊಗ್ಗ ಟೆಕ್ನಾಲಜೀಸ್ ಲಿ, ಶಿವಮೊಗ್ಗ

ಈ) ಬೃಹತ್ ಕೈಗಾರಿಕೆಗಳ ಪುನಶ್ಚೇತನಕ್ಕಾಗಿ ಸರ್ಕಾರದ ವತಿಯಿಂದ ಸಹಾಯಧನ ಅವಕಾಶವಿರುವುದಿಲ್ಲ. ಆದರೆ ಕಾರ್ಖಾನೆಗಳು ಪುನಶ್ಚೇತನಗೊಳಿಸಲು Board for Industrial & Financial Reconstruction (BIFR) ನಲ್ಲಿ ನೊಂದಯಿಸಿ, ಬಿ.ಐ.ಎಫ್.ಆರ್ ಸಲಹೆಯಂತೆ ಪರಿಗಣಿಸಲ್ಪಟ್ಟ ರೋಗಗ್ರಸ್ಥ ಕಾರ್ಖಾನೆಗಳಿಗೆ ಸರ್ಕಾರದ ಆದೇಶದ ಸಂಖ್ಯೆ: ಸಿಐ2/ಬಿಐಎಫ್/2010, ದಿನಾಂಕ:20/10/2010ರನ್ವಯ ಪರಿಶೀಲಿಸಿ ಪರಿಹಾರ ಮತ್ತು ರಿಯಾಯತಿಗಳನ್ನು ಮಂಜೂರು ಮಾಡಲಾಗುತ್ತಿದೆ.

ಉ) ಉತ್ತರ ಕರ್ನಾಟಕದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗಾಗಿ ಸರ್ಕಾರವು ಉದ್ದೇಶಿಸಿದೆ. ಈ ಭಾಗದಿಂದ ಉದ್ಯೋಗವನ್ನರಿಸಿ ವಲಸೆ ಬರುವ ಜನಸಂಖ್ಯಾ ಅಸಮತೋಲನ ನಿವಾರಣೆಗಾಗಿ ಹೊಸ ಕೈಗಾರಿಕಾ ನೀತಿ 2014–19 ರಲ್ಲಿ ವಿಶೇಷ ಬಂಡವಾಳ ವಲಯ (ಎಸ್.ಐ.ಆರ್) ಪ್ರಕಟಿಸಲಾಗಿದೆ. ಅದರಂತೆ, ಬೆಂಗಳೂರಿನಲ್ಲಿ ದಟ್ಟತೆಯನ್ನು ಕಡಿಮೆ ಮಾಡಿ ಕೈಗಾರಿಕಾಭಿವೃದ್ಧಿಯ ಮೂಲಕ ಇತರ ಪ್ರದೇಶಗಳನ್ನು ಬೆಳೆಸಲು ಅವಕಾಶವುಳ್ಳ ಪ್ರದೇಶಗಳನ್ನು ವಿಶೇಷ ಬಂಡವಾಳ ವಲಯಗಳೆಂದು (ಎಸ್ಐಆರ್‌ಗಳು) ಪ್ರಕಟಿಸಿ ಗಣನೀಯವಾಗಿ ಮೂಲ ವ್ಯವಸ್ಥೆ ಬೆಂಬಲವನ್ನು ಒದಗಿಸಲು ರಾಜ್ಯ ಸರ್ಕಾರ

ಉದ್ದೇಶಿಸಿದೆ. ಧಾರವಾಡ, ಬೆಳಗಾವಿ, ಹಾವೇರಿ, ಗದಗ ಜಿಲ್ಲೆಗಳಿಗೆ ಅನ್ವಯಿಸುವಂತೆ ಈ ರೀತಿಯ ಒಂದು ಎಸ್‌ಐಆರ್ ವಲಯವನ್ನು ಪ್ರಕಟಿಸಲು ಉದ್ದೇಶಿಸಲಾಗಿದೆ.

ಬಾಗಲಕೋಟೆ, ಬಿಜಾಪುರ, ರಾಯಚೂರು, ಕೊಪ್ಪಳ, ಬಳ್ಳಾರಿ ಜಿಲ್ಲೆಗಳನ್ನು ಕೈಗಾರಿಕಾ ಕೇಂದ್ರ ಬಿಂದುಗಳಾಗಿ ಅಭಿವೃದ್ಧಿಪಡಿಸಲು ಹೊಸ ಕೈಗಾರಿಕಾ ನೀತಿ 2014–19 ರಲ್ಲಿ ಪ್ರಸ್ತಾಪಿಸಿದೆ.

ಮುಂಬರುವ ದಿನಗಳಲ್ಲಿ ರಾಜ್ಯದ ಉತ್ತರ ಕರ್ನಾಟಕ ಭಾಗದಲ್ಲಿ ಉದ್ದಿಮೆಗಳ ಸ್ಥಾಪನೆಗೆ ಉತ್ತೇಜನ ನೀಡಲು ಉತ್ತರ ಕರ್ನಾಟಕದ 6 ಜಿಲ್ಲೆಗಳಾದ ಬೀದರ್, ಬಳ್ಳಾರಿ ಗುಲ್ಬರ್ಗಾ, ಯಾದಗಿರ್, ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಗಳನ್ನು 2014–19 ಕೈಗಾರಿಕಾ ನೀತಿಯನ್ವಯ ಹೈದರಾಬಾದ್–ಕರ್ನಾಟಕ ಪ್ರದೇಶದಡಿ ವರ್ಗೀಕರಿಸಿದೆ.

ಹೈದರಾಬಾದ್–ಕರ್ನಾಟಕ ಪ್ರದೇಶಕ್ಕಾಗಿ ನೀಡಲಾಗಿರುವ ಕಲಮು 371(ಜೆ) ಸ್ಥಾನಮಾನವನ್ನು ಸದುಪಯೋಗ ಪಡಿಸಿಕೊಂಡು, ಒಂದು ಬಲಿಷ್ಠ ಕೈಗಾರಿಕಾ ನೆಲೆಯನ್ನು ಕಲ್ಪಿಸಲು, ಸಮಗ್ರ ಅಭಿವೃದ್ಧಿಗಾಗಿ ನಿಧಿಗಳನ್ನು ಸರಿಸಮಾನವಾಗಿ ನಿಗದಿಪಡಿಸಿ, ವಲಯದ ಜನರಿಗೆ ಸಮಾನ ಅವಕಾಶಗಳು ಮತ್ತು ಸೌಕರ್ಯಗಳನ್ನು ಒದಗಿಸುವ ಉದ್ದೇದಿಂದ. ವಿಶೇಷ ಪ್ರೋತ್ಸಾಹಗಳನ್ನು ಕೆಳಕಂಡಂತೆ ನೀಡಲಾಗುವುದು.

1. ಸರಾಸರಿ ತಲಾವಾರು ಕೈಗಾರಿಕಾ ಬಂಡವಾಳ ಮತ್ತು ಕೈಗಾರಿಕೆಗಳಲ್ಲಿ ತಲಾವಾರು ಉದ್ಯೋಗದ ಆಧಾರದ ಮೇಲೆ, ಹೈದರಾಬಾದ್–ಕರ್ನಾಟಕ ಪ್ರದೇಶದ ತಾಲ್ಲೂಕುಗಳನ್ನು ಎರಡು ವಲಯವಾಗಿ, ಅಂದರೆ, ಹೆಚ್‌ಕೆ ವಲಯ–1 ಮತ್ತು ಹೆಚ್‌ಕೆ ವಲಯ–2 ಎಂದು ವರ್ಗೀಕರಿಸಲಾಗಿದೆ.

2. ಹೈದರಾಬಾದ್–ಕರ್ನಾಟಕ ಪ್ರದೇಶವು. ಸಾಮಾನ್ಯ ರಿಯಾಯಿತಿ ಮತ್ತು ಪ್ರೋತ್ಸಾಹಗಳ ಹೊರತಾಗಿ ಹೆಚ್ಚುವರಿ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಪಡೆಯುತ್ತದೆ.

3. ಹೈದರಾಬಾದ್–ಕರ್ನಾಟಕ ಪ್ರದೇಶವನ್ನು ಹಿಂದುಗಳಿದ ಪ್ರದೇಶವೆಂದು ಘೋಷಿಸಲಾಗಿರುವುದರಿಂದ ಹಾಗೂ ವಲಯದ ಅಭಿವೃದ್ಧಿಗಾಗಿ ಅಗತ್ಯವಾಗುವ ನಿಧಿಗಳ ಬಗ್ಗೆ ವಿಶೇಷ ಗಮನ ಹರಿಸಬೇಕಾಗಿರುವುದರಿಂದ, ಸೀಮಾಂಧ್ರಗೆ ನೀಡಿರುವ ರೀತಿಯಲ್ಲೇ ಎಕ್ಸೈಸ್ ಶುಲ್ಕ ವಿನಾಯಿತಿ, ಆದಾಯ ತೆರಿಗೆ ವಿನಾಯಿತಿ ಇತ್ಯಾದಿ ಪ್ರೋತ್ಸಾಹಗಳನ್ನು ಹೈದರಾಬಾದ್–ಕರ್ನಾಟಕ ಪ್ರದೇಶಕ್ಕೂ ಕೊಡಬೇಕೆಂದು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರವನ್ನು ಆಗ್ರಹಪಡಿಸಲಿದೆ.

Annexure-1 to LAQ No 124
Details of Large Industries in the Private Sector

Sl. no	District	No. of units
1	Bagalkot	17
2	Bangalore (R)	72
3	Bangalore (U)	315
4	Belgaum	36
5	Bellary	61
6	Bidar	5
7	Bijapur	7
8	Chamarajanagar	3
9	Chikamagalur	3
10	Chikkaballapur	6
11	Chitradurga	7

15	Gadag	3
16	Gulbarga	12
17	Hassan	9
18	Haveri	6
19	Karwar	3
20	Kodagu	1
21	Kolar	23
22	Koppal	26
23	Mandya	12
24	Mysore	48
25	Raichur	10
26	Ramanagara	21
27	Shimoga	13
28	Tumkur	28
29	Udupi	9
30	Yadagiri	1
Total		**789**

	Annexure-2 to LAQ No 124 **Details of large Industries in the Public Sector**
Sl. No	**NAME AND ADDRESS OF THE UNIT**
1	Mysore Electrical Industry Ltd., 7th Mile, Tumkur Road, Bangalore
2	Karnataka Soaps & Detergents Ltd., P.B.No.5531, Rajajinagar, Bangalore
3	NGEF Ltd., Raipura, Dharwad
4	Karnataka Vidhuth Kharkane Ltd., Mysore, Road, Bangalore
5	Mysore Paints & Varnishes Ltd., Paint House, Road, Bangalore
6	Mysore Paper Mills, Bhadravathi
7	Karnataka Silk Industries Ltd., Utility Building, M.G. Road, Bangalore

8	Mysore Lamp works Limited, Bangalore
9	Mysore Sugar company, Mandya

ಹೊಸದಾಗಿ ಪೊಲೀಸ್ ಠಾಣೆ ತೆರೆಯುವುದು

13(114); ಶ್ರೀ ಅಶೋಕ್ ಖೇಣಿ (ಬೀದರ್ ದಕ್ಷಿಣ) ವಿಧಾನ ಸಭೆ ಸದಸ್ಯರು

ಅ) ಬೀದರ ದಕ್ಷಿಣ ವಿಧಾನ ಸಭಾ ಕ್ಷೇತ್ರದಲ್ಲಿ ಹೊಸದಾಗಿ ಪೊಲೀಸ್ ಠಾಣೆ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) 2014–15 ನೇ ಸಾಲಿನಲ್ಲಿ ಪೊಲೀಸ್ ಠಾಣೆ ಪ್ರಾರಂಭಿಸಲಾಗುವುದು;

ಇ) ಹಾಗಿದ್ದಲ್ಲಿ ಹೈದ್ರಾಬಾದ್–ಕರ್ನಾಟಕ ಪ್ರದೇಶಾಭಿವೃದ್ಧಿ ಮಾಡುವ ಕ್ರಿಯಾ ಯೋಜನೆಗೆ ಇಲಾಖೆ ವತಿಯಿಂದ ತಯಾರಿ ನಡೆದಿದೆಯೇ;

ಈ) 2014–15 ನೇ ಸಾಲಿನಲ್ಲಿ ಅನುದಾನ ಲಭ್ಯತೆ ಇದೆಯೇ (ವಿವರ ಒದಗಿಸುವುದು)?

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ಪ್ರಸ್ತುತ ಬೀದರ ದಕ್ಷಿಣ ವಿಧಾನ ಸಭಾ ಕ್ಷೇತ್ರದಲ್ಲಿ ಹೊಸದಾಗಿ ಪೊಲೀಸ್ ಠಾಣೆ ತೆರೆಯುವ ಯಾವುದೆ ಪ್ರಸ್ತಾವನೆಯು ಇಲಾಖೆಯ ಪರಿಶೀಲನೆಯಲ್ಲಿರುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಹೈದ್ರಾಬಾದ್–ಕರ್ನಾಟಕ ಪ್ರದೇಶದಲ್ಲಿ ಕೈಗೊಳ್ಳಲಾಗುತ್ತಿರುವ ಪೊಲೀಸ್ ವಸತಿ ಗೃಹ, ಪೊಲೀಸ್ ಠಾಣೆಗಳ ಜಿಲ್ಲಾವಾರು ಕಾಮಗಾರಿ ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.

ಈ) ಹೈದ್ರಾಬಾದ್–ಕರ್ನಾಟಕ ಪ್ರದೇಶ ಅಭಿವೃದ್ಧಿ ಸಲುವಾಗಿ ಪೊಲೀಸ್ ಇಲಾಖೆಗೆ ಪ್ರತ್ಯೇಕವಾದ ಅನುದಾನ ನಿಗಧಿಯಾಗಿರುವುದಿಲ್ಲ.